# ಅಡುಗೆ ಮಾಡೋದು ಮಜಾ ಇರುತ್ತೆ

**ಕಾರ್ತಿಕ್**
ಸ್ಟಾರ್ ಸುವರ್ಣದ 'ಇಂತಿ ನಿಮ್ಮ ಆಶಾ'ದ ಅಭಯ್



◆ **'ಇಂತಿ ನಿಮ್ಮ ಆಶಾ' ಕಥೆ ಬದಲಾದಂತೆ ಅನ್ನಿಸುತ್ತಿದೆ?**

ಧಾರಾವಾಹಿ ನಿಂತಿತ್ತು. ಈಗ ಮತ್ತೆ ಚಿತ್ರೀಕರಣ ನಡೀತಾ ಇದೆ. ಲಾಕ್ ಡೌನ್ ನಂತರ ಒಂದೆರಡು ಬಾರಿ ಚಿತ್ರೀಕರಣಕ್ಕೂ ಹೋಗಿದ್ದೇನೆ. ಹೊರಾಂಗಣ ಚಿತ್ರೀಕರಣ ಇಲ್ಲದೆ ಇವತ್ತಿನ ಸನ್ನಿವೇಶವನ್ನು ಕಥೆಯೂ ಒಳಗೊಂಡಿದೆ. ಹೊರ ಹೋಗಬೇಕು ಎನ್ನುವ ಸಂದರ್ಭ ಬಂದರೆ, ಹೊರಗಡೆ ಹೋಗಬಾರದು. ಕೊರೊನಾದಿಂದ ತಪ್ಪಿಸಿಕೊಳ್ಳಲು ಮನೆಯಲ್ಲೇ ಇರಬೇಕು ಎಂದು ಕಥೆ ಹೇಳುತ್ತದೆ. ಆ ಮೂಲಕ ಜಾಗೃತಿ ಮೂಡಿಸುವ ಪ್ರಯತ್ನವೂ ಇಲ್ಲಿದೆ.

◆ **ಧಾರಾವಾಹಿಯಲ್ಲಿ ಪುರುಷ ಪಾತ್ರಗಳು ಹೆಚ್ಚು ಸೊರಗುತ್ತವೆ ಅಲ್ವಾ?**

ಸಾಮಾನ್ಯವಾಗಿ ಸಮಾನ ಪ್ರಾಮುಖ್ಯತೆಯನ್ನು ನೀಡಿರುತ್ತಾರೆ. ಟೀವಿ ವೀಕ್ಷಣೆಯಲ್ಲಿ ಗೃಹಿಣಿಯರ ಸಹಭಾಗಿತ್ವದ ಪ್ರಮಾಣದ ದೃಷ್ಟಿಯಿಂದ ಹಾಗೆ ಅನ್ನಿಸಬಹುದು. ನಾಯಕಿಯಂತೆ ನಾಯಕನಿಗೂ ಸಮಾನ ಪ್ರಾಮುಖ್ಯತೆ ಇರುತ್ತದೆ ಎಂದು ನಾನು ಅಂದುಕೊಂಡಿದ್ದೇನೆ. ಮನೆಯ ಕಥೆಗಳು ಧಾರಾವಾಹಿಯ ಕೇಂದ್ರ ಅಲ್ಲಿ ಮನೆ ಮಕ್ಕಳೇ ಮುಖ್ಯ ಆಗುತ್ತಾರೆ. ಅದೂ ಒಳಗೊಳ್ಳುವ ತಾಯ್ತನ ಹಾಗೆ ಅನ್ನಿಸಬಹುದು. ಇತ್ತೀಚೆಗೆ ಆ ಟ್ರೆಂಡ್ ಬದಲಾಗಿದೆ. ಪ್ರೀತಿ ಪ್ರೇಮದ ಕಥೆಗಳೂ ಹೆಚ್ಚಾಗಿವೆ.

◆ **ನಿಮಗೆ ಸಿನಿಮಾಕ್ಕೆ ಅವಕಾಶ ಬಂದರೆ, ಅದನ್ನು ಹೇಗೆ ತೆಗೆದುಕೊಳ್ಳುತ್ತೀರಿ?**

ನನಗೂ ಸಿನಿಮಾದಲ್ಲಿ ನಟಿಸಬೇಕು ಎನ್ನುವುದು ದೊಡ್ಡ ಕನಸು. ಸಿಕ್ಕ ಅವಕಾಶವನ್ನು ಖುಷಿಯಿಂದಲೇ ಒಪ್ಪಿಕೊಳ್ಳುತ್ತೇನೆ. ಒಳ್ಳೆಯ ಕಥೆ ಮತ್ತು ಪಾತ್ರ ಇರಬೇಕಷ್ಟೇ. ನಾಯಕನೇ ಆಗಬೇಕು ಎಂದೇನೂ ಇಲ್ಲ. ಅಭಿನಯ ಮೆರೆಯುವ ಯಾವುದೇ ಪಾತ್ರವಾದರೂ ಸರಿ. ನೆಗೆಟಿವ್ ಗುಣದ ಪಾತ್ರ ನಟನೊಬ್ಬನಿಗೆ ಹೆಚ್ಚು ಸವಾಲುಗಳನ್ನು ಒಡ್ಡುತ್ತದೆ ಎಂದುಕೊಂಡಿದ್ದೇನೆ. ಸೀರಿಯಲ್ ನಿತ್ಯದ ಸಹಜ ಭೋಜನದಂತೆ. ಸಿನಿಮಾಗಳು ಹಬ್ಬ ಇದ್ದಂತೆ. ಸಿನಿಮಾದಲ್ಲಿ ಆಕ್ಷನ್ ತುಂಬ ಇಷ್ಟ ಆಗುತ್ತದೆ, ಲವರ್ ಬಾಯ್ ಕೂಡ ಚೆಂದ ಅನ್ನಿಸುತ್ತದೆ.

◆ **ನಿಮ್ಮ ಜೀವನಶೈಲಿ ಬಗ್ಗೆ ಹೇಳುವುದಾದರೆ...**

ಹುಟ್ಟಿ ಬೆಳೆದಿದ್ದು ಮೈಸೂರು. ಬೆಂಗಳೂರಿಗೆ ಐದಾರು ವರ್ಷಗಳ ಹಿಂದೆ ಬಂದು ನೆಲೆಸಿದ್ದೇನೆ. ಗೆಳೆಯ, ನಟ ಸುಶಾಂತ ಗುಪ್ತ ಜೊತೆ ಮನೆ ಮಾಡಿಕೊಂಡಿದ್ದೇನೆ. ಅಡುಗೆಯನ್ನು ನಾವೇ ಮಾಡುತ್ತೇವೆ. ಮೊದಲು ಒಂದು ಕೆಲಸವನ್ನೂ ಮಾಡದ ನಾನು ತುಂಬ ಚೆಂದ ಅಡುಗೆ ಮಾಡುತ್ತೇನೆ. ಮಾಡಿ ತಿನ್ನುವುದು ಒಳ್ಳೆ ಮಜಾ ಕೊಡುತ್ತದೆ. ಲಾಕ್ ಡೌನ್ ಅವಧಿಯಲ್ಲಿ ಊರಿಗೆ ಹೋಗಿದ್ದೆ. ಮನೆಯಲ್ಲಿ ಆಗಾಗ ನಾನೆ ಅಪ್ಪ ಅಮ್ಮ, ತಂಗಿಗೆ ಅಡುಗೆ ಮಾಡಿ ಊಟ ಬಡಿಸುತ್ತಿದ್ದೆ. ಬಿರಿಯಾನಿಯನ್ನೂ ಗೆಳೆಯರಿಂದ ಕಲಿತಿದ್ದೇನೆ. ಬಹುತೇಕ ಎಲ್ಲ ರೀತಿಯ ಅಡುಗೆ ಮಾಡುತ್ತೇವೆ. ಕೆಲವು ರೆಸಿಪಿಯನ್ನು ಅಮ್ಮನಿಗೆ ಫೋನ್ ಮಾಡಿ ಕೇಳುತ್ತೇನೆ. ಚಪಾತಿ ಸರಿಯಾಗಿ ಮಾಡಲು ಬರುವುದಿಲ್ಲ. ಅಕ್ಕಿ ಆಧಾರಿತ ಆಹಾರ ಪದಾರ್ಥ ಮಾಡುತ್ತೇನೆ. ಊಟ ರಸಸ್ವಾದ ಸವಿಯುವ ಖುಷಿಗಿಂತ ಮಾಡುವುದೇ ಇನ್ನೂ ಖುಷಿ ಕೊಡುತ್ತೆ. ವರ್ಕೌಟ್ ನಿತ್ಯದ ಕಾಯಕವಾಗಿದೆ. ಲಾಕ್ ಡೌನ್ ಅವಧಿಯಲ್ಲೂ ಖಾಸಗಿಯಾಗಿ ವರ್ಕೌಟ್ ಮಾಡುತ್ತಿದ್ದೆ. ಕ್ರಿಕೆಟ್, ಫುಟ್ ಬಾಲ್ ಆಡುತ್ತೇನೆ. ಕ್ರೀಡೆ ಅಂದರೆ ಆಸಕ್ತಿ ಇದೆ. ನಟನಾಗಿರುವುದರಿಂದ ವೆಬ್‌ನಲ್ಲಿ ಅದಕ್ಕೆ ಸಂಬಂಧ ಪಟ್ಟ ಸಿರೀಸ್ ನೋಡುತ್ತೇನೆ.

◆ **ಅಮ್ಮ ಪ್ರಾಧ್ಯಾನ್ಯ ಕಥೆಯಲ್ಲಿ ಅಭಯ್ ಪಾತ್ರ ಹೇಗಿದೆ?**

ಅಮ್ಮನೇ ಈ ಕಥೆಯ ನಾಯಕಿ. ಅಭಯ್ ಪಾತ್ರ ಕಾರ್ತಿಕ್ ಆಗಿ ಕೂಡ ಹೆಚ್ಚು ಹೊಂದಾಣಿಕೆ ಆಗುತ್ತದೆ. ಅಮ್ಮನಿಗೆ ಅಭಯ್ ಬೆಂಬಲವಾಗಿ ನಿಲ್ಲುತ್ತಾನೆ. ಅಮ್ಮ ಏನಾದರೂ ಮಾಡಲೇಬೇಕು ಎಂದು ನಿರ್ಧರಿಸಿದಾಗ ಅವರ ಆಸೆ ಪೂರೈಯಿಸಲು ನೆರವಾಗುತ್ತೇನೆ. 25 ವರ್ಷಗಳ ಕಾಲ ಮನೆಯಲ್ಲೇ ಇದ್ದ ತಾಯಿಗೆ ಆರ್ಥಿಕ ಸ್ವಾವಲಂಬನೆ ಸಾಧಿಸುವಂತೆ ಪ್ರೇರಣೆಯಾಗುತ್ತೇನೆ. ಅಮ್ಮ ಈ ಪಾತ್ರದಲ್ಲಿ ನನಗೆ ಮುದ್ದು ಎಂದು ಕರೆಯುತ್ತಾರೆ. ಸ್ವಲ್ಪ ದಿನಗಳ ಹಿಂದೆ ಬೇರೆ ಒಂದು ಧಾರಾವಾಹಿಯ ಚಿತ್ರೀಕರಣಕ್ಕೆ ಹೊರಗಡೆ ಹೋದಾಗ ಅಲ್ಲಿಗೆ ಪಿಕ್ನಿಕ್ ಬಂದ ಒಂದು ಕುಟುಂಬದವರು 'ಮುದ್ದು' ಹೇಗಿದ್ದೀಯಾ ಎಂದೆ ಮಾತನಾಡಿಸಿದರು. ತಾಯಿ ಮಗನ ಬಾಂಧವ್ಯದ ಬಗ್ಗೆ ಅವರು ಪ್ರಶಂಸಿದರು. ಪಾತ್ರ ಅವರನ್ನು ತಲುಪಿರುವ ಪರಿ ನೋಡಿ ಒಬ್ಬ ನಟನಿಗೆ ಇದಕ್ಕಿಂತ ಬೇರೆ ಇನ್ನೇನು ಬೇಕು ಎಂದು ಅನ್ನಿಸಿತು.

■ **ರಾಘವೇಂದ್ರ ಕೆ.**